**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 43/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಕುಮಾರ್ | ಪಿಡಬ್ಲ್ಯೂ- 05 |
| ತಂದೆಯ ಹೆಸರು | - ಬಸವರಾಜ್ | ಸಿಡಬ್ಲ್ಯೂ -06 |
| ವಯಸ್ಸು | - 32 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಸಖರಾಯಪಟ್ಟಣ | |

ದಿನಾಂಕಃ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ, ನಾನು ಆತನನ್ನು ಈ ಹಿಂದೆ ನೋಡಿಲ್ಲ. ಚಾಸಾ.1 ಮತ್ತು ಸಹ ಪಂಚರಾದ ಚಾಸಾ.7 ನನಗೆ ಗೊತ್ತಿಲ್ಲ.

**2.** ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿಃ 01-08-2023 ರಂದು ಅಮಾನತು ಪಂಚನಾಮೆಗೆ ಸಹಕರಿಸುವಂತೆ ಸಖರಾಯಪಟ್ಟಣ ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎನ್ನಲಾದ ನೋಟೀಸ್ ಮತ್ತು ಅದೇ ದಿನ ಸಾಕ್ಷಿಯ ಸಮಕ್ಷಮ ಜರುಗಿಸಿದ್ದಾರೆ ಎನ್ನಲಾದ ಅಮಾನತ್ತು ಪಂಚನಾಮೆಗಳಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ.8 ಮತ್ತು ನಿಪಿ.9 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಮತ್ತು ನಿಪಿ.9(ಎ) ಎಂದು ಗುರುತಿಸಲಾಯಿತು.

**3.** ಈಗ್ಗೆ 2 ವರೆ ವರ್ಷಗಳ ಹಿಂದೆ ಸದರಿ ಸಹಿಗಳನ್ನು ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೆನು, ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ದಾಖಲೆಗಳಿಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನ್ನನ್ನು ಅಮಾನತು ಪಡಿಸಿಕೊಂಡಿಲ್ಲ.

4. ಸಾಕ್ಷಿಗೆ 3 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.10 ರಿಂದ ಪಿ.12 ಎಂದು ಗುರುತಿಸಲಾಯಿತು. ಪೊಲೀಸರು ಹೇಳಿದ ಮೇರೆಗೆ ಸದರಿ ಫೋಟೋಗಳಿಗೆ ನಿಂತುಕೊಂಡಿದ್ದೇನೆ. ಆದರೆ ಸದರಿ ಫೋಟೋಗಳನ್ನು ಯಾವ ವಿಚಾರಕ್ಕೆ ತೆಗೆದುಕೊಳ್ಳಲಾಗಿದೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ
ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು
ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ
ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

**5.** ದಿಃ 01-08-2023 ರಂದು ಪಂಚನಾಮೆಗೆ ಸಹಕರಿಸುವಂತೆ ಸಖರಾಯಪಟ್ಟಣ ಪೊಲೀಸರು ನಿಮಗೆ ಮತ್ತು ಚಾಸಾ.7 ರವರಿಗೆ ನಿಪಿ.8 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ನೀವು ಒಪ್ಪಿಕೊಂಡು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹಾಜರಾಗಿದ್ದೀರಿ ಎಂದರೆ ಸರಿಯಲ್ಲ. ಸದರಿ ಠಾಣೆಯಲ್ಲಿ ಆರೋಪಿ ಹಾಜರಿದ್ದನು ಎಂದರೆ ಸರಿಯಲ್ಲ.

6. ನಂತರ ಆರೋಪಿ ನಿಮ್ಮನ್ನು ಮತ್ತು ಪೊಲೀಸರನ್ನು ಸಖರಾಯಪಟ್ಟಣ ರೈಲ್ವೆ ನಿಲ್ದಾಣಕ್ಕೆ ಹೋಗುವ ರಸ್ತೆಯ ಬಳಿ ಕರೆದುಕೊಂಡು ಹೋಗಿ ಅಲ್ಲಿ ಗಿಡದ ಒಳಗೆ ನಿಲ್ಲಿಸಲಾಗಿದ್ದ ಕೆಎ-18-ಇಹೆಚ್-2932 ನೋಂದಣಿ ಸಂಖ್ಯೆಯುಳ್ಳ ಮೋಟಾರು ಬೈಕನ್ನು, ಮರದ ಹಿಡಿಯಿರುವ ಒಂದು ಮಚ್ಚನ್ನು ಮತ್ತು ಒಂದು ಕಬ್ಬಿಣದ ಕತ್ತಿಯನ್ನು ಹಾಜರುಪಡಿಸಿ ಸದರಿ ವಸ್ತುಗಳನ್ನು ಕೃತ್ಯಕ್ಕೆ ಉಪಯೋಗಿಸಿದ್ದಾಗಿ ತಿಳಿಸಿದನು ಎಂದರೆ ಸರಿಯಲ್ಲ. ನಂತರ ಪೊಲೀಸರು ಸದರಿ ವಸ್ತುಗಳನ್ನು ನಿಮ್ಮ ಸಮಕ್ಷಮ ನಿಪಿ.9 ರಂತೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಅದಕ್ಕೆ ನಮ್ಮ ಸಹಿಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಿಪಿ.10 ರಿಂದ ಪಿ.12 ರಂತೆ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

7. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

ನನಗೆ ಕನ್ನಡ ಭಾಷೆಯಲ್ಲಿ ಓದಲು ಬರೆಯಲು ಬರುತ್ತದೆ. ನೀವು ಯಾವುದೇ ದಾಖಲೆಗೆ ಅದರಲ್ಲಿ ಬರೆದಿರುವುದನ್ನು ಓದಿ ತಿಳಿದುಕೊಳ್ಳದೇ ಸಹಿ ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಿನ ನಾನು ಕೆಲಸಕ್ಕೆ ಹೋಗುತ್ತಿದ್ದೆನು ಹಾಗಾಗಿ ಆ ದಿನ ಪೊಲೀಸರು ನನ್ನ ಸಹಿ ಪಡೆದುಕೊಂಡ ದಾಖಲೆಯಲ್ಲಿ ಬರೆದಿದ್ದನ್ನು ನಾನು ಓದಲಿಲ್ಲ ಮತ್ತು ತಿಳಿದುಕೊಳ್ಳಲಿಲ್ಲ ಎನ್ನುತ್ತಾರೆ. ಚಾಸಾ.1 ರವರು ಈಗ್ಗೆ 2 ತಿಂಗಳ ಹಿಂದೆ ಕೊಲೆಯಾದರು ಎಂದರೆ ಸರಿ. ಆತ ಈಗ ಬದುಕಿಲ್ಲ ಎನ್ನುವ ಕಾರಣಕ್ಕೆ ನೀವು ಆರೋಪಿಯೊಂದಿಗೆ ಶಾಮೀಲಾಗಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ